ರಾಮನಗರ ಜಿಲ್ಲಾ ಪಂಚಾಯತ್

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ.

ಸಂಖ್ಯೆಎ3/ಮಾನ್ಯತೆ,ನ/99/2019–20 594/2019-20 16/12/2019 ದಿನಾಂಕ: 16–12–2019

ನಮೂನೆ–3

(1999ರ ಮಾನ್ಯತೆ ನಿಯಮ 4 ರಂತೆ)

**ವಿಷಯ:** ಪ್ರೂಡೆನ್ಸ್ ಶಾಲೆ ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ಈ ಶಾಲೆಯ ಮಾನ್ಯತೆ ನವೀಕರಿಸುವ ಬಗ್ಗೆ

**ಉಲ್ಲೇಖ:** 1) ಕಾರ್ಯದರ್ಶಿಗಳು ಕೆ.ಪಿ.ಶ್ರೀಕಂಠಯ್ಯ ಮೆಮೋರಿಯಲ್ ಮಲ್ಟಿಪರ್ಪಸ್ ಎಜುಕೇಷನ್ ಟ್ರಸ್ಟ್(ರಿ) ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ ರವರ ಮನವಿ ದಿನಾಂಕ:14–08–2019

2) ಕ್ಷೇತ್ರ ಶಿಕ್ಷಣಾಧಿಕಾರಿಗಳ ಶಾಲಾ ಭೇಟಿ ವರದಿ ದಿನಾಂಕ:19–09–2019

*****************

ಕಾರ್ಯದರ್ಶಿಗಳು, ಕೆ.ಪಿ.ಶ್ರೀಕಂಠಯ್ಯ ಮೆಮೋರಿಯಲ್ ಮಲ್ಟಿಪರ್ಪಸ್ ಎಜುಕೇಷನ್ ಟ್ರಸ್ಟ್(ರಿ) ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ ಈ ಆಡಳಿತ ಮಂಡಳಿಯ ವತಿಯಿಂದ ನಡೆಯುತ್ತಿರುವ ಪ್ರೂಡೆನ್ಸ್ ಶಾಲೆಯನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1983(ಕರ್ನಾಟಕ ಆಕ್ಟ್–1–1995) ಸೆಕ್ಷನ್ 36(6) ರಂತೆ ಈ ದಿನಾಂಕ:16–12–2019 ರಂದು ಕೆಳಕಂಡ ಷರತ್ತುಗಳ ಮೇಲೆ ಅನುದಾನ ರಹಿತವಾಗಿ ಮಾನ್ಯತೆಯನ್ನು ನವೀಕರಿಸಿದೆ.

| ಶಾಲೆಯ ವಿಳಾಸ | ಮಾನ್ಯತೆ ನೀಡಿರುವ ಮಾಧ್ಯಮ | ಅನುದಾನ ರಹಿತ | ಮಾನ್ಯತೆ ನೀಡಿರುವ ತರಗತಿಗಳು | ವಿಭಾಗಗಳು | ಮಾನ್ಯತೆ ನವೀಕರಿಸಿದ ವರ್ಷ |
|---|---|---|---|---|---|
| ಪ್ರೂಡೆನ್ಸ್ ಶಾಲೆ ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, | ಆಂಗ್ಲ | ಅನುದಾನ ರಹಿತವಾಗಿ | 1ನೇ | 1 ವಿಭಾಗ | 2019–20ನೇ ಸಾಲಿನಿಂದ 2020–21 ರ ವರೆಗೆ 01 ರಿಂದ 08ನೇ ತರಗತಿಗೆ ಮಾನ್ಯತೆ ನವೀಕರಿಸಿದೆ. |
| | | | 2ನೇ | 1 ವಿಭಾಗ | |
| | | | 3ನೇ | 1 ವಿಭಾಗ | |
| | | | 4ನೇ | 1 ವಿಭಾಗ | |
| | | | 5ನೇ | 1 ವಿಭಾಗ | |
| | | | 6ನೇ | 1 ವಿಭಾಗ | |
| | | | 7ನೇ | 1 ವಿಭಾಗ | |
| | | | 8ನೇ | 1 ವಿಭಾಗ | |

**ಷರತ್ತುಗಳು:–**

1. ಶಿಕ್ಷಣ ಕಾಯ್ದೆಯ ಎಲ್ಲಾ ನಿಯಮಗಳನ್ನು ಸರ್ಕಾರಿ ಮತ್ತು ಇಲಾಖಾ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
2. ನೇಮಕಾತಿಗಳನ್ನು ಸರ್ಕಾರಿ ಆದೇಶದ ಪ್ರಕಾರ ಮಾಡತಕ್ಕದ್ದು.
3. ಇಲಾಖಾ ನಿಯಮದಂತೆ ಮಾತ್ರ ಶುಲ್ಕ ವಸೂಲಿ ಮಾಡುವುದು ಮತ್ತು ಇದರ ಲೆಕ್ಕ ಪತ್ರಗಳನ್ನು ನಿರ್ವಹಿಸಿ ಶಾಲೆಯ ಹೆಸರಿನಲ್ಲಿಟ್ಟು ಶಾಲಾ ತನಿಖಾ ಸಮಯದಲ್ಲಿ ಹಾಜರುಪಡಿಸತಕ್ಕದ್ದು.ಹಾಗೂ ಅವಧಿ ಮುಗಿದಿರುವ ಸ್ಥಿರನಿಧಿಯನ್ನು ನವೀಕರಿಸಿಕೊಳ್ಳಬೇಕು.
4. ಅನುದಾನ ಸಂಹಿತೆ ಪ್ರಕಾರ ಶಾಲೆಯ ಎಲ್ಲಾ ಅವಶ್ಯಕತೆಗಳನ್ನು ಆಡಳಿತ ಮಂಡಳಿಯವರು ತಕ್ಷಣ ಪೂರೈಸಬೇಕು.
5. ಶಾಲಾ ಕಟ್ಟಡ ಬೆಂಕಿ ಹಾಗೂ ವಿದ್ಯುತ್ ಅವಘಡಗಳಿಂದ ಮುಕ್ತ ಮಾಡಲು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳತಕ್ಕದ್ದು.
6. ನಿಗಧಿತ ವಿದ್ಯಾರ್ಹತೆ ಹೊಂದಿದ ಶಿಕ್ಷಕರಿಂದ ಮಾತ್ರ ಬೋಧನಾ ಚಟುವಟಿಕೆಗಳನ್ನು ನಡೆಸತಕ್ಕದ್ದು. ಹಾಗೂ
7. ಮಕ್ಕಳ ರಕ್ಷಣೆ/ಸುರಕ್ಷತೆ ಬಗ್ಗೆ ಕ್ರಮ ಕೈಗೊಳ್ಳುವುದು ಕಡ್ಡಾಯವಾಗಿರುತ್ತದೆ
8. ಶಾಲಾ ಕಟ್ಟಡ ನಿರ್ಮಾಣ/ಕಟ್ಟಡದ ಮೇಲೆ ಕೊಠಡಿ ನಿರ್ಮಾಣ ಹಾಗೂ ದುರಸ್ತಿ ಕಾರ್ಯಗಳನ್ನು ಶಾಲಾ ಅವಧಿಯ ದಿನಗಳಲ್ಲಿ ಕೈಗೆತ್ತಿಕೊಳ್ಳಬಾರದು

9. ಶಾಲಾ ಬೋಧಕ/ಭೋಧಕೇತರ ಸಿಬ್ಬಂದಿಗಳಿಗೆ ಅವರ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿಯ ಕನಿಷ್ಠ ವೇತನ ನೀಡುವುದು, ಬ್ಯಾಂಕ್ ಮೂಲಕ ವೇತನ ಪಾವತಿಸುವುದು, ಹಾಗೂ ಸೇವಾ ಭದ್ರತೆ ಒದಗಿಸುವುದು ಕಡ್ಡಾಯವಾಗಿರುತ್ತದೆ. ಮತ್ತು, ಶಾಲೆಯಲ್ಲಿ ಕಡ್ಡಾಯವಾಗಿ "ಅಗ್ನಿನಂದಕ"ಅಳವಡಿಸುವುದು ಕಟ್ಟಡದ ಬಗ್ಗೆ ನ್ಯಾಷನಲ್ ಬಿಲ್ಡಿಂಗ್ ಕೋಡ್ ಆಫ್ ಇಂಡಿಯಾ 2005ರಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು.

10. ಶಿಕ್ಷಣ ಕಾಯ್ದೆಯ ಅನ್ವಯ ವಿದ್ಯಾರ್ಥಿಗಳ ಸಂಖ್ಯೆ ಇರಬೇಕು ಮತ್ತು ಇಲಾಖೆಯು ನಿಗದಿಪಡಿಸಿರುವ ಪಠ್ಯಕ್ರಮಗಳನ್ನು ಅನುಸರಿಸಬೇಕು ಹಾಗೂ ಬೋಧಿದಬೇಕು ಹಾಗೂ ಅಗತ್ಯವಾದ ಸ್ಥಳಾವಕಾಶ ,ಪಾಠೋಪಕರಣ ಪೀಠೋಪಕರಣ ಹಾಗೂ ಆಟದ ಮೈದಾನ ಇವುಗಳನ್ನು ಒದಗಿಸಬೇಕು.

11. ನಿಯಾಮಾನುಸಾರಸಂಬಂದ ಪಟ್ಟ ಪ್ರಾಧಿಕಾರಕ್ಕೆ ಆಡಿಟ್ ರಿಪೋರ್ಟ ಸಲ್ಲಿಸಿ ಅನುಮೋದನೆ ಪಡೆದಿರಬೇಕು.

12. ಕರ್ನಾಟಕ ಶಿಕ್ಷಣ ಕಾಯ್ದೆಯ ಅನ್ವಯ ಎಲ್ಲಾ ಮಾನ್ಯತೆ ನಿಯಮಗಳನ್ನು ಪಾಲಿಸತಕ್ಕದ್ದು ತಪ್ಪದ್ದಲ್ಲಿ ನಿಯಾಮಾನುಸಾರ ಮಾನ್ಯತೆಯನ್ನು ಹಿಂತೆಗೆದುಕೊಳ್ಳಲಾಗುವುದು.

13.ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009 ಅಧಿನಿಯಮದ ಪ್ರಕಾರ ಮತ್ತು ನಿಯಮನುಸಾರ ದಾಖಲಾತಿ ಮಾಡಿಕೊಳ್ಳತಕ್ಕದ್ದು

14.ಮುಂದಿನ ಶೈಕ್ಷಣಿಕ ವರ್ಷದಲ್ಲಿ ದಾಖಲಾತಿ/ಹಾಜರಾತಿ ಹೆಚ್ಚಿಸಿಕೊಳ್ಳುವ ಷರತ್ತಿಗೊಳಪಡಿಸಿ ಮಾನ್ಯತೆ ನೀಡಿದೆ. ತಪ್ಪಿದ್ದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು

15.ಸರ್ಕಾರಿ ಆದೇಶ ಸಂಖ್ಯೆ ಇಡಿ 341 ಪಿಎಂಸಿ 2017 ಬೆಂ ದಿನಾಂಕ:05-03-2019 ರಲ್ಲಿರುವ ಎಲ್ಲಾ ಷರತ್ತು. ಮತ್ತು ನಿಬಂಧನೆಗಳನ್ನು ಪೂರೈಸುವುದು.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಕನಕಪುರ

ಪ್ರತಿಗಳು;-

1. ಕಾರ್ಯದರ್ಶಿಗಳು ಕೆ.ಪಿ.ಶ್ರೀಕಂಠಯ್ಯ ಮೆಮೋರಿಯಲ್ ಮಲ್ಟಿಪರ್ಪಸ್ ಎಜುಕೇಷನ್ ಟ್ರಸ್ಟ್(ರಿ) ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ
2) ಕಚೇರಿ ಪ್ರತಿ.